ದಿನಾಂಕಃ 08.02.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೊಧಿಸಲಾಯಿತು

ಪಾಟೀ ಸವಾಲುಃ ಶ್ರೀ ಐ.ಎನ್ ವಕೀಲರಿಂದ

ಅಸಲು ದಾವಾ ಸಂ.38/2009 ನ್ಯಾಯಾಲಯದಲ್ಲಿ ಇದ್ದ ಹಾಗೂ ನಡೆಯುತ್ತಿದ್ದ ಬಗ್ಗೆ ನನಗೆ ಸದರಿ ದಾವೆಯ ಪಾರಂಭದಿಂದಲೂ ಗೊತ್ತಿತ್ತು ಎಂದರೆ ಸರಿ. ಸದರಿ ದಾವೆಯನ್ನು ಮುಂದುವರಿಸಲು ನ್ಯಾಯಾಲಯ ಹಲವಾರು ಅವಕಾಶಗಳನ್ನು ಕೊಟ್ಟಿತ್ತು ಎಂದರೆ ಸರಿ. ವಾದಿ ದಾವೆಯನ್ನು ಮುಂದುವರಿಸದೇ ಇದ್ದ ಕಾರಣ ನಂತರ ನ್ಯಾಯಾಲಯವು ಸದರಿ ದಾವೆಯನ್ನು ವಜಾ ಮಾಡಿತ್ತು ಎಂದರೆ ಸರಿ. ಅಸಲು ದಾವಾ 38/2009 ಶಾಶ್ವತ ಪ್ರತಿಬಂಧಕಾಜ್ಞೆಯನ್ನು ಕೋರಿ ದಾಖಲು ಮಾಡಿದ್ದ ಕಾರಣ ಅದನ್ನು ಪುನರ್ ಸ್ಥಾಪನೆ ಗೊಳಿಸಲು ಯಾವುದೇ ಸಕಾರಣಗಳನ್ನು ನಾನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಜೆಎಂಎಫ್‌ಸಿ, ಸಾಗರ